

ವರ್ಷದವನಿದ್ದ. ‘ನಮ್ಮೂರಿಗೆ ಬರ್ತೀಯೇನು?’ ಎಂದು ಸಹಜವಾಗಿ ಚಂದ್ರಕಾಂತಯ್ಯ ಕರೆದ. ‘ಬರ್ತೀನಿ ದೊಡ್ಡಪ್ಪ’ ಅಂದೇ ದೊಡ್ಡಪ್ಪ ಎಂದೇ ಕರೆದಿದ್ದ. ಸಂಬಂಧಿಸಿದವರಿಗೆ ಮಾತಾಡಿ ಕರೆತಂದು ಬಿಟ್ಟ. ದೊಡ್ಡವರು ವಯಸ್ಸಿನಿಂದಲೂ, ಆರೋಗ್ಯದಿಂದಲೂ ಮೆತ್ತಗಾಗಿದ್ದರು. ಹುಡುಗನನ್ನು ನೋಡಿ ‘ಇಲ್ಲೆ ಮಠದಾಗ ಇರಲಿಬಿಡು. ಶಿವರುದ್ರಯ್ಯನ ಸಂಗಡ’ ಎಂದಿದ್ದರು. ಇಲ್ಲದಿದ್ದರೆ ಮನೆಗೇ ಕರೆ ತರುತ್ತಿದ್ದ. ಈಗಲೂ ಶಿವಲಿಂಗನಿಗೆ ಈ ಮನೆ ತೆರೆದೇ ಇತ್ತು.

‘ಚಂದ್ರಮತಿ ವಾರ್ಡನ್ ಮೊನ್ನೆ ಮಠಕ್ಕೆ ಬಂದಾಗ